**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 147/2020**

**ಚಾ.ಸಾ.** 1

**ಪ್ರಾ.ಸಾ.** 1

**ದಿನಾಂಕಃ 05.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಕಲ್ಲಯ್ಯ ಮಲ್ಲಯ್ಯ ಮಠಪತಿ |
| ತಂದೆಃ ಗಂಡನ ಹೆಸರು | ಮಲ್ಲಯ್ಯ |
| ಉದ್ಯೋಗ | ಎ ಎಸ್ ಐ ಕುಂದಗೋಳ ಪೊಲೀಸ್ ಠಾಣೆ |
| ವಯಸ್ಸು | 46 ವರ್ಷ |
| ವಾಸಸ್ಥಳ | ಕುಂದಗೋಳ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದ**

ದಿಃ 01.12.2019 ರಂದು ನಾನು ಕಲಘಟಗಿ ಪೊಲೀಸ್ ಠಾಣೆಯ ಎಸ್ ಎಚ್ ಓ ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರವರು ದೂರು ಹಾಗೂ ಗುನ್ನಾ ಸ್ಥಳ ಪಂಚನಾಮೆ ಮತ್ತು ದೊರೆತ ಮುದ್ದೆ ಮಾಲು ಮತ್ತು ಆರೋಪಿತರನ್ನು ತಂದು ಹಾಜರ ಪಡಿಸಿದ್ದು, ಸ್ವಿಕರಿಸಿ ಕಲಘಟಗಿ ಪೊಲೀಸ್ ಠಾಣೆ ಗುನ್ನಾ ನಂ.149/2019 ಕಲಂ 32 ಮತ್ತು 34 ಕೆ ಇ ಆ್ಯಕ್ಟ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರಧಿಯ ಮೂಲ ಪ್ರತಿಯನ್ನು ಪಿಸಿ 669 ರವರ ಮುಖಾಂತರ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ದಿನಾಂಕಃ 01-12-2019 ರಂದು ಆರೋಪಿತರನ್ನು ವಿಚಾರಣೆ ಮಾಡಲಾಗಿ ಗುನ್ನೆ ಮಾಡಿಕೊಂಡಿದ್ದು ಒಪ್ಪಿರುವ ಕಾರಣ ದಸ್ತಗಿರಿ ನೀಯಮವನ್ನು ಪಾಲಿಸಿ ದಸ್ತಗಿರಿ ಮಾಡಿ ಠಾಣೆಯಲ್ಲಿ

ಇರಿಸಿಕೊಂಡು ಮಾಲು ಪಟ್ಟಿಯನ್ನು ಭರಾಯಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿ ಕೊಟ್ಟೆ. ಸಾಕ್ಷಿದಾರರಾದ ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡೆನು. ರಿಮ್ಯಾಂಡ ಅರ್ಜಿಯನ್ನು ತಯಾರಿಸಿ ಆರೋಪಿತರನ್ನು ಯೋಗ್ಯ ಬೆಂಗಾವಲಿನಲ್ಲಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿ ಕೊಟ್ಟೆ. ಸದರಿ ಪ್ರಕರಣವನ್ನು ಮುಂದಿನ ತನಿಖೆಗಾಗಿ ಚಾಸಾ-9 ರವರಿಗೆ ಹಸ್ತಾಂತರಿಸಿದೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ ಅದರ ಮೇಲೆ ಇರುವ ಸಾಕ್ಷಿಯ ಹಿಂಬರಹ ಮತ್ತು ಸಹಿಯನ್ನು ನಿಪಿ-2 ಬಿ ಮತ್ತು ಸಿ ಎಂದು ಗುರುತಿಸಲಾಯಿತು.

ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು ಅದರ ಮೇಲೆ ಇರುವ ಸಾಕ್ಷಿಯ ಗುರುತನ್ನು ನಿಪಿ-9 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮಾಲು ಪಟ್ಟಿ ಎಂದು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದೆ ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಈಗಾಗಲೆ ಚಾಸಾ-9 ರವರ ಮುಖಾಂತರ ನಿಪಿ-8 ಎ ಎಂದು ಗುರುತಿಸಲಾಗಿದೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮಮೂ-1 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯ ಮುಂದೆ ಇರುವ ವ್ಯಕ್ತಿಯನ್ನು ನೋಡಿ ಗುರುತಿಸಿದ್ದು ಸದರೀಯವರ ಹೆಸರು ನಾಗರಾಜ ಸವಣೂರ ಎಂದು ಸದರೀಯವರು ಈ ಪ್ರಕರಣದ 1 ನೇ ಆರೋಪಿ ಎಂದು ಗುರುತಿಸುತ್ತಾರೆ.

**ಪಾಟೀ ಸವಾಲುಃ ಅಪಾದಿತನ ಪರ ಶ್ರೀ ಕೆ ಬಿ ಜಿ ವಕೀಲರಿಂದ**

ನಿಪಿ-1 ಮತ್ತು 2 ನ್ನು ಠಾಣೆಯಲ್ಲೆ ಬರೆಯಲ್ಪಟ್ಟಿತು ಎಂದರೆ ಸಾಕ್ಷಿಯು ನಿಪಿ-1 ನ್ನು ಗುನ್ನಾ ಸ್ಥಳದಲ್ಲಿ ಬರೆದಿದ್ದು ನಿಸಿ-2 ನ್ನು ಠಾಣೆಯಲ್ಲೆ ಗಣಕೀಕ್ರತ ಮಾಡಲಾಯಿತು ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಇರುವ ಪಂಚನಾಮೆಗೆ ಸಾಕ್ಷಿದಾರರಾಗಿ ಸಹಿ ಮಾಡಿರುವ ಪಂಚರನ್ನುಕರೆದು ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲಾ ಎಂದು ನುಡಿಯುತ್ತಾರೆ. ನಾನು ಖುದ್ದು ಗುನ್ನಾ ಸ್ಥಳಕ್ಕೆ ಹೋಗಿ ನೋಡಿಲ್ಲ. ನನ್ನ ತನಿಖೆಯಲ್ಲಿ ಆರೋಪಿಯ ವಿರುದ್ದ ಯಾವುದೇ ಅಪರಾಧವು ಸಾಬೀತು ಆಗದೇ ಇದ್ದರೂ

ಸಹ ಸದರೀ ಆರೋಪಿಯ ವಿರುದ್ದ ಇಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಎಲ್ಲಾ ಕಾಗದ ಪತ್ರಗಳನ್ನು ಠಾಣೆಯಲ್ಲೆ ತಯಾರಿ ಮಾಡಿ ಖೊಟ್ಟಿ ಅಂತಿಮ ವರದಿಯನ್ನು ನನ್ನ ತಖಿಕಾ ಕಾಲದಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲಿಗೂ ಆರೋಪಿಗು ಯಾವುದೇ ರೀತಿಯ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಠಾಣೆಯ ಸಂಖ್ಯೆಯನ್ನು ಹೆಚ್ಚಿಗೆ ತೋರಿಸುವ ಸಲುವಾಗಿ ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು-ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**